ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 27 /2024

| | | |
|---|---|---|
| ಹೆಸರು | : ಗಾಡ್ವಿನ್ | ಪಿಡಬ್ಲ್ಯೂ-4 |
| ತಂದೆಯ ಹೆಸರು | : ಎ.ಕೆ.ಜೋಸೆಫ್ | ಸಿಡಬ್ಲ್ಯೂ-3 |
| ವಯಸ್ಸು | : 40 ವರ್ಷ | |
| ವೃತ್ತಿ | : ಅಬಕಾರಿ ಪೇದೆ | |
| ವಾಸ ಸ್ಥಳ | : ಬೆಂಗಳೂರು | |

ದಿಃ06.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ಏಪ್ರಿಲ್ 2022 ರಿಂದ ನವೆಂಬರ್ 2024 ವರೆಗೆ ಮರಿಕೇರಿ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ **16-08-2023** ರಂದು ನಾನು ಮತ್ತು ಚಾಸಾ-**4** ಮತ್ತು **6** ಇಲಾಖಾ ವಾಹನದಲ್ಲಿ ಬಜೆಗುಂಡಿ ಗ್ರಾಮದಲ್ಲಿ ಸಂಜೆ **7** ಗಂಟೆಗೆ ಗಸ್ತು ಮಾಡುತ್ತಿರುವಾಗ ನನಗೆ ಬಂದ ಖಚಿತ ಮಾಹಿತಿ ಏನೇಂದರೆ, ಸೋಮವಾರಪೇಟೆ ತಾಲ್ಲೂಕಿನ ಗರಗಂದೂರು ಬಿ ಗ್ರಾಮದ ನಿವಾಸಿಯಾದ ಎನ್.ಸಿ.ದಾಮೋದರ್ ರವರ ಮನೆಯಲ್ಲಿ ಅಕ್ರಮವಾಗಿ ಮದ್ಯದ ದಾಸ್ತಾನು ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ, ನಾನು ಲಿಖಿತ ದೂರನ್ನು ಚಾಸಾ-**1**ರವರಿಗೆ ನೀಡಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿ ಕೊಂಡ ಮೇರೆಗೆ, ಕೂಡಲೇ ನಾವು ಕಾರ್ಯಪ್ರವರ್ತರಾಗಿ ಗರಗಂದೂರು ಬಿ ಗ್ರಾಮದ ಬಳಿ ಬರಲು ಅಲ್ಲೇ ರಸ್ತೆ ಬಳಿ ಹಾದು ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಚಾಸಾ-**2** ಮತ್ತು **3**ರವರಿಗೆ ಬಂದ ವಿಷಯ ಅವರಿಗೆ ತಿಳಿಸಿ, ಪಂಚರಾಗಿ ಬರಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿರುತ್ತಾರೆ ಅವರು ಚಾಸಾ **2** ಮತ್ತು **3** ಆಗಿರುತ್ತಾರೆ. ಅವರೊಂದಿಗೆ ಆರೋಪಿಯ ಮನೆ ಬಳಿ ಬರಲು ಮನೆಯ ಒಳಗಡೆ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಕೇಳಲಾಗಿ ಎನ್.ಸಿ.ದಾಮೋದರ್ ಎಂದು ತಿಳಿಸಿರುತ್ತಾರೆ. ಆ ವ್ಯಕ್ತಿಗೆ ನಾವು ಬಂದ ವಿಷಯ ತಿಳಿಸಿ ನ್ಯಾಯಾಲಯದಿಂದ ಶೋಧನಾ

ವಾರೆಂಟ್ ಪಡೆಯಲು ಸಮಯ ಇಲ್ಲದಿದ್ದರಿಂದ ಸ್ಥಳದಲ್ಲಿ ಶೋಧನಾ ವಾರೆಂಟ್ ತಯಾರಿಸಿಕೊಂಡು ಪಂಚರ ಸಹಿ ಪಡೆದು ಪಂಚರೊಂದಿಗೆ ಮನೆಯನ್ನು ಪ್ರವೇಶಿಸಿ ಶೋಧನಾ ಕಾರ್ಯ ಪ್ರಾರಂಭ ಮಾಡಿರುತ್ತೇವೆ. ಮನೆಯ ಮೇಲ್ಛಾವಣಿಯು ಶೀಟಿನಿಂದ ಕೂಡಿದ್ದು, ಮನೆಯ ಹಾಲ್ ನ ಮೂಲೆಯಲ್ಲಿ **3** ಪ್ಲಾಸ್ಟಿಕ್ ಚೀಲದಲ್ಲಿ ಏನೋ ವಸ್ತುಗಳು ಇರುವುದು ಗೋಚರಿಸಿದ್ದು, ಅದನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತದೆ. ಮೇಲ್ಕಂಡ ಗೋಣಿ ಚೀಲಗಳಿಗೆ ಕ್ರಮ ಸಂಖ್ಯೆ **1** ರಿಂದ **3** ಎಂದು ನೀಡಲಾಯಿತು. ಕ್ರಮ ಸಂಖ್ಯೆ **1** ರ ಚೀಲ ಬಿಳಿ ಹಸಿರು ಕಿತ್ತಲೆ ಮಿಶ್ರಿತ ಪ್ಲಾಸ್ಟಿಕ್ ಚೀಲವಾಗಿದ್ದು, ಅದರಲ್ಲಿದ್ದ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಎಣಿಕೆ ಮಾಡಲಾಗಿ **180** ಮಿಲಿಯ **79** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **47.07** ಲೀಟರ್ ಇರುತ್ತದೆ. **2** ನೇ ಪ್ಲಾಸ್ಟಿಕ್ ಚೀಲ ಹಸಿರು ಮತ್ತು ಬಿಳಿ ಮಿಶ್ರಿತ ಪ್ಲಾಸ್ಟಿಕ್ ಚೀಲ ಆಗಿದ್ದು ಅದರಲ್ಲಿ **90** ಮಿಲಿಯ **200** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **18** ಲೀಟರ್ ಇರುತ್ತದೆ. **3** ನೇ ಪ್ಲಾಸ್ಟಿಕ್ ಚೀಲ ಬಿಳಿ ಕೆಂಪು ಹಸಿರು ಮಿಶ್ರಿತವಾಗಿದ್ದು ಅದರಲ್ಲಿ **90** ಮಿಲಿಯ **165** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **47.07** ಲೀಟರ್ ಇರುತ್ತದೆ. ಸ್ಥಳದಲ್ಲಿದ್ದ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಹೇಳಿರುತ್ತಾರೆ. ಆ ವ್ಯಕ್ತಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ಪಡೆಯ ಲಾಯಿತು. ತಮ್ಮ ಬಳಿ ಯಾವುದಾದರೂ ರಹದಾರಿ ಪತ್ರ ಇದೆಯ ಮತ್ತು ಯಾವ ಉದ್ದೇಶಕ್ಕೆ ಇಟ್ಟುಕೊಂಡಿದ್ದೀರಾ ಎಂದು ಕೇಳಿದಾಗ, ರಹದಾರಿ ಪತ್ರ ಇಲ್ಲ ಅದನ್ನು ಮಾರಾಟ ಮಾಡಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನು ವಶಪಡಿಸಿಕೊಳ್ಳಲಾಯಿತು, ವಶಪಡಿಸಿಕೊಂಡ ಕ್ರಮ ಸಂಖ್ಯೆ **1** ರ ಚೀಲದಿಂದ **180** ಮಿಲಿಯ **10** ಜಾನ್ಸ್

ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು, 2 ನೇ ಚೀಲದಲ್ಲಿ 90 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು, 3 ನೇ ಚೀಲದಿಂದ 90 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು ರಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆಯಲಾಯಿತು ಒಟ್ಟು 3.600 ಲೀಟರ್ ಮದ್ಯ ಇರುತ್ತದೆ. ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಬಿಗಿದು, ಹರಗಿನ ಸಹಾಯದಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಪಂಚರ ಸಹಿ ಮತ್ತು ಆರೋಪಿಯ ಸ್ವ ವಿಳಾಸವಿರುವ ಚೀಟಿಯನ್ನು ಅಂಟಿಸಲಾಯಿತು. ಅದೇ ರೀತಿ ಉಳಿದ ಮದ್ಯ ಇದ್ದಂತಹ 3 ಚೀಲಗಳಿಗೂ ಸಹ ಪಂಚರ ಸಹಿ ಮತ್ತು ಆರೋಪಿಯ ಸ್ವ ವಿಳಾಸವಿರುವ ಚೀಟಿಯನ್ನು ಅಂಟಿಸಲಾಯಿತು. ಮಾದರಿ ಮೊಹರು ತಯಾರಿಸಲಾಯಿತು. ಆರೋಪಿಗೆ 41 ಎ ನೋಟಿಸನ್ನು ನೀಡುತ್ತೇವೆ ಎಂದು ತಿಳಿಸಿ ಮುಂದಿನ ಕಾನೂನು ಕ್ರಮ ಮಾಡಲಾಯಿತು. ಮಹಜರ್ ಅನ್ನು 7.30 ರಿಂದ 9 ಗಂಟೆಗೆ ಮಾಡಲಾಯಿತು. ಮುದ್ದೆ ಮಾಲನ್ನು ಕಚೇರಿಗೆ ತಂದು ಆರೋಪಿಯ ವಿರುದ್ದ ಪ್ರ.ವ.ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ದೂರನ್ನು ಈಗಾಗಲೇ ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು, , ಮಹಜರ್ ಅನ್ನು ಈಗಾಗಲೇ ನಿಪಿ 3 ಎಂದು, ಸಹಿಯನ್ನು ನಿಪಿ 3(ಡಿ) ಎಂದು, 2 ಛಾಯಾ ಚಿತ್ರಗಳನ್ನು ಈಗಾಗಲೇ ನಿಪಿ 6 ಮತ್ತು 7, ಎಂದು ಸಿಡಿಯನ್ನು ಈಗಾಗಲೇ ನಿಪಿ.8 ಎಂದು, ಗುರುತಿಸಲಾಯಿತು.

180 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು ಈಗಾಗಲೇ ಮುಮಾ 1 ಎಂದು, 90 ಮಿಲಿಯ 20 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು ಈಗಾಗಲೇ ಮುಮಾ.2 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ  ಕೆ.ಎಸ್.ಪಿ ವಕೀಲರಿಂದ:</u>

ನನಗೆ  ಮಾಹಿತಿ 7 ಗಂಟೆಗೆ ಬಂದಿರುತ್ತದೆ, ಈ ಪುಕಾರನ್ನು ಚಾಸಾ-1 ರವರು ನೀಡಿರುತ್ತಾರೆ,  ನಿಪಿ-1 ರಲ್ಲಿ ಚಾಸಾ-1 ರವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ, ಎಷ್ಟು ಗಂಟೆಗೆ ಸ್ವೀಕಾರ ಮಾಡಲಾಗಿದೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ, ದಾಳಿ ಮಾಡುವಾಗ ಯಾವುದೇ ಪ್ರಕರಣದಲ್ಲಿ ಕ್ರೈ ನಂಬರ್ ಅನ್ನು ಕಚೇರಿಯಲ್ಲಿ ನೀಡುತ್ತಿದ್ದರು ಎಂದರೆ ಸರಿ, ಮಾದರಿ ಮೊಹರು ತಯಾರು ಮಾಡುವಾಗ ಕ್ರೈಮ್ ನಂಬರ್ ಅನ್ನು ಕೊಟ್ಟಿದ್ದರು ಎಂದರೆ ಸರಿ,  ದೂರಿನಲ್ಲಿ, ಮಹಜರಿನಲ್ಲಿ ಕ್ರೈಮ್ ನಂಬರ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ, ನನಗೆ ಚಾಸಾ-2 ಮತ್ತು 3 ರವರು ಆರೋಪಿಯ ಮನೆಯ ಹತ್ತಿರ ಹೋದಗ ಸಿಕ್ಕಿರುತ್ತಾರೆ, ಅವರಿಗೆ ಈ ಕೇಸಿನ ಬಗ್ಗೆ ನೋಟಿಸು ನೀಡಿರುತ್ತೇವೆ, ನಮ್ಮ ಚಲನ-ವಲನ ಪುಸ್ತಕದಲ್ಲಿ ನಮೂದು ಮಾಡುತ್ತಿದ್ದೇವು ಎಂದರೆ ಸರಿ.

2. ಗಸ್ತು ಮುಗಿಸಿ ಬಂದ ಮೇಲೆ ಡೈರಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ, ದಾಳಿ ಮಾಡಿದ ಜಾಗದಲ್ಲಿ ಅಕ್ಕ-ಪಕ್ಕದ ಮನೆಗಳು ಇರುವುದು ಕಂಡು ಬಂದಿಲ್ಲ, ಕಾರಣ ಕಾಫಿ ತೋಟಗಳು ಇದ್ದವು ಎಂದು ನುಡಿದಿರುತ್ತಾರೆ. ಮನೆಯಲ್ಲಿ ಯಾರು ಇರಲಿಲ್ಲ ಎಂದರೆ ಸರಿ, ಮದ್ಯವನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ಯಾವುದೇ ಪ್ಲಾಸ್ಟಿಕ್ ಗ್ಲಾಸ್ ಗಳು ಸಿಕ್ಕಿರುವುದಿಲ್ಲ, ಗಸ್ತಿಗೆ ಹೋದ ವಾಹನದ ಸಂಖ್ಯೆಯನ್ನು ಲಾಗ್ ಪುಸ್ತಕದಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ, ಮಹಜರಿನಲ್ಲಿ ಯಾವ ವಾಹನದಲ್ಲಿ ಗಸ್ತಿಗೆ ಹೋಗಿದ್ದೇವು ಎಂಬುದರ ಬಗ್ಗೆ ನಮೂದು ಮಾಡಿಲ್ಲ, ನಾವು ಯಾವುದೇಸ್ಥಳಕ್ಕೆ ಹೋಗಿಲ್ಲ ಮಹಜರನ್ನು ಕಚೇರಿಯಲ್ಲಿ ಮಾಡಿರುತ್ತೇವೆ ಎಂದರೆ ಸುಳ್ಳು, ನಾವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ, ಮುದ್ದೆಮಾಲುಗಳನ್ನು ಮತ್ತು ಪೋಟೋಗಳನ್ನು ಈ ಕೇಸಿಕೋಸ್ಕರ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

sd/-

ಪ್ರ.ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ